**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 1702-2018**

ಸರ್ಕಾರದ ಪರ
ಕುಂದಾಪುರ ಗ್ರಾಮಾಂತರ ಠಾಣಾ ಪೊಲೀಸರು. --- ಪಿರ್ಯಾದಿದಾರರು

-ಮತ್ತು-

ಗಣೇಶ್, 34 ವರ್ಷ,
ತಂದೆಃ ದಿ. ಗೋವಿಂದ,
ವಾಸಃ ಕೃಷ್ಣ ರುಕ್ಮಿಣಿ ನಿವಾಸ,
ತಂಗಡಿ, ಶಿರಿಯಾರ ಗ್ರಾಮ,
ಉಡುಪಿ ತಾಲೂಕು ಮತ್ತು ಜಿಲ್ಲೆ. --- ಆರೋಪಿ

**ಃದೋಷಾರೋಪಣೆಃ**

ಶ್ರೀಮತಿ ನಾಗರತ್ನಮ್ಮ ಬಿ.ಎ.ಎಲ್., ಎಲ್ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 24.11.2017 ರಂದು ಸಂಜೆ 05.00 ಗಂಟೆಗೆ ಆರೋಪಿತರಾದ ನೀವು ಕುಂದಾಪುರ ತಾಲೂಕು ಹೆಸ್ಕತ್ತೂರು ಗ್ರಾಮದ ಹಾರ್ಯಾಡಿ ಎಂಬಲ್ಲಿ ಹರಿಯುವ ಹೆಸ್ಕತ್ತೂರು ಹೊಳೆ ಹಳ್ಳದ ದಡದಲ್ಲಿ ಸಾಕ್ಷಿ 6 ನೇಯವರಿಗೆ ಸಂಬಂಧಿಸಿದ ಸರ್ವೆ ನಂಬ್ರ 37/7 ಸ್ಥಳದಿಂದ ಸರಕಾರಕ್ಕೆ ಸೇರಿದ 5,600/- ರೂಪಾಯಿ ಮೌಲ್ಯದ 7 ಮೆಟ್ರಿಕ್ ಟನ್ ಸಾಮಾನ್ಯ ಮರಳನ್ನು ನಿಮ್ಮ ಸ್ವಂತ ಲಾಭಕ್ಕೋಸ್ಕರ ಕಳವು ಮಾಡಿ ನಿಮ್ಮ ಮಾಲಿಕತ್ವದ ಕೆಎ-20-ಸಿ-812 ನೇ ಟಿಪ್ಪರ್ ಲಾರಿಯಲ್ಲಿ ಯಾವುದೇ ಪರವಾನಿಗೆ ಇಲ್ಲದೇ ಸಾಗಾಟ ಮಾಡಿರುವಿರೆಂದೂ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 379 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 12.03.2021

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.